# ಗಂಗೊಳ್ಳಿಯ ಮತ್ಸ್ಯ ಬೇಟೆಗಾರರು!



■ ಸುನೀಲ್ ಬಾರ್ಕೂರ್
ಚಿತ್ರ: ಹರೀಶ ಕೂಳೂರು

ಪಂಚಗಂಗಾವಳಿ.. ಕುಂದಾಪುರ ಮತ್ತು ಗಂಗೊಳ್ಳಿಯ ಆಸುಪಾಸು ಹರಿಯುವ ಪುಟ್ಟ ನದಿ. ಈ ನದಿಗೆ ಐದು ಚಿಕ್ಕ ನದಿಗಳಾದ ಸೌಪರ್ಣಿಕಾ, ವರಾಹಿ, ಕೇದಕಾ, ಚಕ್ರಾ ಮತ್ತು ಕುಬ್ಜಾ ಸೇರುವುದರಿಂದ ಈ ಹೆಸರು. ನದಿಯ ಈ ಹೆಸರಿನಿಂದಲೇ ಗಂಗೊಳ್ಳಿಗೆ ತನ್ನ ಹೆಸರು ದಕ್ಕಿದೆಯೆಂದೂ ಹೇಳಲಾಗುತ್ತದೆ. ಆ ಊರು ಈ ಪಂಚನದಿಗಳು ಅರಬ್ಬಿ ಸಮುದ್ರಕ್ಕೆ ಸೇರಿಕೊಳ್ಳಲು ಆರಿಸಿಕೊಂಡ ತಾಣವೂ ಹೌದು. ಒಂದೆಡೆ ಸಿಹಿ ನೀರು, ಇನ್ನೊಂದೆಡೆ ಉಪ್ಪು ನೀರು– ಹೀಗೆ ಈ ಪ್ರದೇಶವೆಲ್ಲ ಜಲಾವೃತ. ಜಲವೆಂದರೆ ಜಲಚರಗಳೂ ಇರಬೇಕಲ್ಲ ಮತ್ತು ಆ ಜಲಚರಗಳನ್ನು ಬೇಟೆಯಾಡಲು ಪಕ್ಷಿಗಳು!

ಪಂಚನದಿಗಳ ಜೊತೆಗೆ ಸಾಗರದ ವೈವಿಧ್ಯಮಯ ಮತ್ಸ್ಯಗಳು ಎಲ್ಲಾ ಒಂದೆಡೆ ಸಿಗುವುದರಿಂದ ಇಲ್ಲಿನ